ಕರ್ನಾಟಕ ಸರ್ಕಾರ
ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಒಪೆಕ್)
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನ, ರಾಯಚೂರು
ಇ-ಮೇಲ್- rgsshopec@gmail.com ದೂರವಾಣಿ – 08532-238011

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 26 ನೇ ವಿಶೇಷ ಆಡಳಿತ ಮಂಡಳಿ ಸಭೆಯ ನಡವಳಿಗಳು.

**ಸನ್ಮಾನ್ಯ ಶ್ರೀ.ಡಾ॥ಶರಣ ಪ್ರಕಾಶ ಆರ್.ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 10.08.2017 ರಂದು ಜರುಗಿದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಶೇಷ ಆಡಳಿತ ಮಂಡಳಿ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಸನ್ಮಾನ್ಯ ಶ್ರೀ.ಡಾ॥ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಅಧ್ಯಕ್ಷರು
   ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ,ಬೆಂಗಳೂರು ಹಾಗೂ
   ಗೌರವಾನ್ವಿತ ಅಧ್ಯಕ್ಷರು, ರಾಜೀವ ಗಾಂಧಿ ಸುಪರ್ ಸ್ಪೆಷಾಲಿಟಿ
   ಆಸ್ಪತ್ರೆಯ ವಿಶೇಷ ಆಡಳಿತ ಮಂಡಳಿ.

2. ಸನ್ಮಾನ್ಯ ಮಂಜುಲ.ವಿ., ಭಾ.ಆ.ಸೇ. – ಉಪಾಧ್ಯಕ್ಷರು
   ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
   ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.

3. ಡಾ॥ಸಚ್ಚಿದಾನಂದ, – ಸದಸ್ಯರು
   ಮಾನ್ಯ ನಿರ್ದೇಶಕರು,
   ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ,
   ಬೆಂಗಳೂರು

4. ಶ್ರೀಮತಿ ಡಾ॥ಕವಿತಾ ಪಾಟೀಲ್, – ಸದಸ್ಯ ಕಾರ್ಯದರ್ಶಿಗಳು
   ಮಾನ್ಯ ನಿರ್ದೇಶಕರು,
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ
   ಸದಸ್ಯ ಕಾರ್ಯದರ್ಶಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ
   ಆಸ್ಪತ್ರೆಯ ವಿಶೇಷ ಆಡಳಿತ ಮಂಡಳಿ.

ವಿಶೇಷಾಧಿಕಾರಿಗಳು

Dean Cum Director

5. ಶ್ರೀ.ಚಂದ್ರಶೇಖರ — ವಿಶೇಷ ಆಹ್ವಾನಿತರು
   ಮಾನ್ಯ ಸರ್ಕಾರದ ಉಪ ಕಾರ್ಯದರ್ಶಿಗಳು,
   ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.

6. ಶ್ರೀ.ಡಾ||ಸುರೇಶ.ವಿ.ಸಗರದ — ವಿಶೇಷ ಆಹ್ವಾನಿತರು
   ಮಾನ್ಯ ವಿಶೇಷಾಧಿಕಾರಿಗಳು,
   ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
   ರಾಯಚೂರು.

7. ಡಾ||ಟಿ.ರೋಣಿ — ವಿಶೇಷ ಆಹ್ವಾನಿತರು
   ಮುಖ್ಯ ಆಡಳಿತಾಧಿಕಾರಿಗಳು,
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ರಾಯಚೂರು

**ವಿಷಯ ಸೂಚಿ ಸಂಖ್ಯೆ : 1. ಸಿಬ್ಬಂದಿಗಳ ಸ್ಟೈಪಂಡ್ ಹುದ್ದೆಯಿಂದ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಪದನಾಮೀಕರಣಗೊಳಿಸಿ ವೇತನ ಹೆಚ್ಚಿಸುವ ಕುರಿತು.**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ದಿನಾಂಕ 01.06.2012 ರಿಂದ ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವೈದ್ಯಕೀಯ ಶಿಕ್ಷಣ ಇಲಾಖೆಗೆ ವಿಲೀನಗೊಳಿಸಿ ಆದೇಶಿಸಿತು. ಈ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಿದ ಬೋಧಕೇತರ 'ಸಿ' ವೃಂದದ ಸಿಬ್ಬಂದಿಗಳನ್ನು ರಿಮ್ಸ್ ಸಂಸ್ಥೆಯ 17ನೇ ಮತ್ತು 18ನೇ ಆಡಳಿತ ಮಂಡಳಿಯ ಆದೇಶದಂತೆ, ಅವರ ಸೇವೆಯ ಜ್ಯೇಷ್ಠತೆಯ ಆಧಾರದ ಮೇಲೆ ರೂ.8000/– ಸ್ಟೈಪಂಡ್ ಆಧಾರದ ಮೇಲೆ ಸರ್ಕಾರದಿಂದ ಸೃಜನೆಗೊಂಡು ಮಂಜೂರಾದ ಹುದ್ದೆಗಳನ್ವಯ ಶುಶ್ರೂಷಕರನ್ನು ದಿನಾಂಕ 01.08.2013ರಿಂದ ಹಾಗೂ ತಂತ್ರಜ್ಞರು ಹಾಗೂ ಉಳಿದ ತಾಂತ್ರಿಕೇತರ ಸಿಬ್ಬಂದಿಗಳನ್ನು ದಿನಾಂಕ 01.11.2013 ರಿಂದ ನೇಮಕ ಮಾಡಿಕೊಂಡು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಸೂಪರ್ ಸ್ಪೆಷಾಲಿಟಿ ವಿಭಾಗವಾಗಿ ದಿನಾಂಕ 01.11.2013 ರಿಂದ ಆಸ್ಪತ್ರೆಯನ್ನು ಪುನರಾರಂಭ ಮಾಡಿರಲಾಗಿರುತ್ತದೆ.

ಸದರಿ ಸಿಬ್ಬಂದಿಗಳು ಸುಮಾರು 4 ವರ್ಷಗಳಿಂದ ರಿಮ್ಸ್ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ತಮಗೆ ನೀಡುತ್ತಿರುವ ರೂ.8000/– ಸ್ಟೈಪಂಡಿರಿಯಿಂದ ಕುಟುಂಬ ನಿರ್ವಹಣೆ ಕಷ್ಟ ಸಾಧ್ಯವೆಂದು ತಮ್ಮ ವೇತನವನ್ನು ಹೆಚ್ಚಿಸಲು ಕೋರಿರುತ್ತಾರೆ.

ಈಗಾಗಲೆ 25ನೇ ರಿಮ್ಸ್ ಆಡಳಿತ ಮಂಡಳಿಯಲ್ಲಿ ನಿರ್ಧರಿಸಲಾಗಿರುವ ಮೂಲ ವೇತನದಲ್ಲಿ 85% ರಷ್ಟು ನೀಡಲು ಕೋರಿ ಸಾಕಷ್ಟು ಬಾರಿ ಮನವಿಯನ್ನು ಮಾಡಿರುತ್ತಾರೆ. ದಿನಾಂಕ 04.12.2016 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಅಧ್ಯಕ್ಷತೆಯಲ್ಲಿ ರಾಜಿವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ರೂ.8000/– ಸ್ಟೈಪಂಡನ್ನು ರೂ.10,000/– ಕ್ಕೆ ಹೆಚ್ಚಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಬೇಕಾಗಿತ್ತು.

ವಿಶೇಷಾಧಿಕಾರಿಗಳು
ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆ,

Dean Cum Director
Raichur Institute of Medical Science

ಸದರಿ ಸಿಬ್ಬಂದಿಗಳು ತಮ್ಮ ವೇತನ ಹೆಚ್ಚಸಲು ಕೋರಿ ದಿನಾಂಕ 15.07.2017 ರಿಂದ 17.07.2017 ರ 3 ದಿನಗಳ ವರೆಗೆ ಮುಷ್ಕರವನ್ನು ಕೈಗೊಂಡಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರು ಸದರಿ ಸಿಬ್ಬಂಧಿಗಳ ಜೊತೆ ಎರಡು ಬಾರಿ ಸಮಾಲೋಚಿಸಿ ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಸಭೆಯ ಗಮನಕ್ಕೆ ತಂದು ನಿರ್ಣಯ ಕೈಗೊಳ್ಳಲಾಗುವದು ಎಂದು ತಿಳಿಸಿರುತ್ತಾರೆ.

ಸದರಿ ಸಿಬ್ಬಂದಿಗಳು ತಮ್ಮ ವೇತನ ಹೆಚ್ಚಳ ಮಾಡಲು ಕೋರಿ ದಿನಾಂಕ 14.08.2017 ರಿಂದ ಮುಷ್ಕರ ಹೂಡುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ವೇತನ ತಾರತಮ್ಯ ಸಮಿತಿ ಶಿಫಾರಸ್ಸಿನ ವರದಿಯ ಆಧಾರದ ಮೇಲೆ, ದಿನಾಂಕ 24.08.2016 ರಂದು ಜರುಗಿದ ರಿಮ್ಸ್ ಸಂಸ್ಥೆಯ 25ನೇ ಆಡಳಿತ ಮಂಡಳಿಯ ಸಭೆಯಲ್ಲಿ ಈ ಕೆಳಗಿನಂತೆ 'ಸಿ' ವೃಂದದ ವೇತನ ಕುರಿತು ನಿರ್ಧರಿಸಲಾಗಿರುತ್ತದೆ.

**1) ಒಂದು ವರ್ಷದಿಂದ ಮೂರು ವರ್ಷದವರೆಗೆ ಕಾರ್ಯನಿರ್ವಹಿದ ಸಿಬ್ಬಂದಿಗಳಗೆ ಮೂಲ ವೇತನದ ಶೇಕಡಾ 75 ರಷ್ಟು ವೇತನವನ್ನು**

**2) ಮೂರು ವರ್ಷದಿಂದ ಐದು ವರ್ಷದವರೆಗೆ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಮೂಲ ವೇತನದ ಶೇಕಡಾ 85 ರಷ್ಟು ವೇತನವನ್ನು**

**3) ಐದು ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ರೂ.100/- ಗಳನ್ನು ಕಡಿತಗೊಳಿಸಿ ಪಾವತಿಸುವಂತೆ ಸೂಚಿಸಲಾಗಿದೆ.**

ಸದರಿ ಸಿಬ್ಬಂದಿಗಳ ಸ್ಟೈಪಂಡ್ ಹುದ್ದೆಯಿಂದ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಗುತ್ತಿಗೆ ಹುದ್ದೆಗಳನ್ನಾಗಿ ಪದನಾಮೀಕರಣಗೊಳಿಸಿ ಈಗಾಗಲೆ 4 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರನ್ನು ಸೇರಿಸಿ 'ಸಿ' ವೃಂದದ ಸಿಬ್ಬಂದಿಗಳಿಗೆ ಮೂಲ ವೇತನದ ಮೇಲೆ ಸದರಿ ಸಿಬ್ಬಂದಿಗಳ ಸೇವಾ ಹಿರಿತನದ ಆಧಾರದ ಮೇಲೆ ಶೇಕಡಾ 75, 85 ಹಾಗೂ ಮೂಲ ವೇತನದಲ್ಲಿ ರೂ.100 ನ್ನು ಕಟಾಯಿಸಿ ವೇತನ ಪಾವತಿಸಲು ಈಗಾಗಲೆ ರಿಮ್ಸ್ ನ 25ನೇ ಆಡಳಿತ ಸಭೆಯಲ್ಲಿ ದಿನಾಂಕ 24.08.2016 ರಿಂದ ಅನುಮೋದಿಸಿದಂತೆ ವೇತನ ಪಾವತಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ : - ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಯಲ್ಲಿ ವಿವಿಧ ಹುದ್ದೆಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ : ಆಕುಕ 138 ಎಂಎಸ್‌ಎಫ್ 2011, ಬೆಂಗಳೂರು ದಿನಾಂಕ 04.02.2013 ರ ಪ್ರಕಾರ ಮಂಜೂರಾದ ಹುದ್ದೆಗಳನ್ವಯ ಕಾರ್ಯನಿರ್ವಹಿಸುತ್ತಿರುವ 'ಸಿ' ವೃಂದದ ಸಿಬ್ಬಂದಿಗಳಿಗೆ ಆಯಾ ಹುದ್ದೆಗಳ ಮೂಲ ವೇತನದ ಮೇಲೆ ಈ ಕೆಳಗಿನಂತೆ ಸ್ಟೈಪಂಡನ್ನು ನೀಡಲು ತೀರ್ಮಾನಿಸಲಾಯಿತು.**

**1) ಒಂದು ವರ್ಷದಿಂದ ಮೂರು ವರ್ಷದವರೆಗೆ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಗೆ ಮೂಲ ವೇತನದ ಶೇಕಡಾ 75 ರಷ್ಟು ವೇತನವನ್ನು.**

**2) ಮೂರು ವರ್ಷದಿಂದ ಐದು ವರ್ಷದವರೆಗೆ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಮೂಲ ವೇತನದ ಶೇಕಡಾ 85 ರಷ್ಟು ವೇತನವನ್ನು.**

**3) ಐದು ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ರೂ.100/- ಗಳನ್ನು ಕಡಿತಗೊಳಿಸಿ ಪಾವತಿಸುವಂತೆ ಸೂಚಿಸಲಾಗಿದೆ.**

ವಿಶೇಷಾಧಿಕಾರಿಗಳು

## 'ಸಿ' ವೃಂದದ ಸಿಬ್ಬಂದಿಗಳಿಗೆ ಸ್ಟೈಪಂಡನ್ನು ಪಾವತಿಸುವ ವಿವರ ಈ ಕೆಳಗಿನಂತಿದೆ.

**Nursing Staff : - 26**

| S.No. | Employee Name | Qualification | Working As | D.O.J | Working since | Basic Salary | To be paid 85% |
|---|---|---|---|---|---|---|---|
| 01 | Mrs.Sindhu G | GNM | Nursing | 02.08.2013 | 4 Years | 17650.00 | 15003.00 |
| 02 | Mrs.Rajeshwari | GNM | Nursing | 07.08.2013 | 4 Years | 17650.00 | 15003.00 |
| 03 | Mr.Jagadeesha.T | GNM | Nursing | 01.08.2013 | 4 Years | 17650.00 | 15003.00 |
| 04 | Mr.Paulraj | GNM | Nursing | 01.08.2013 | 4 Years | 17650.00 | 15003.00 |
| 05 | Mr.Mahadeva | GNM | Nursing | 01.08.2013 | 4 Years | 17650.00 | 15003.00 |
| 06 | Mr. Venkateshwar | GNM | Nursing | 03.08.2013 | 4 Years | 17650.00 | 15003.00 |
| 07 | MD. Ghouse | GNM | Nursing | 01.08.2013 | 4 Years | 17650.00 | 15003.00 |
| 08 | Mrs. Usha. P | GNM | Nursing | 01.08.2013 | 4 Years | 17650.00 | 15003.00 |
| | | | Nursing | 01.10.2013 | 3 Years 10 mnths | 17650.00 | 15003.00 |
| 09 | Mr. Uday Kumar | GNM | Nursing | 01.08.2013 | 4 Years | 17650.00 | 15003.00 |
| 10 | Mrs. Savitha.N | GNM | Nursing | 06.08.2013 | 4 Years | 17650.00 | 15003.00 |
| 11 | Mrs. Sunitha.H | GNM | Nursing | 06.08.2013 | 4 Years | 17650.00 | 15003.00 |
| 12 | Mr. Wilson | GNM | Nursing | 01.08.2013 | 4 Years | 17650.00 | 15003.00 |
| 13 | Ms. Alivelamma | GNM, PB. BSC | Nursing | 06.08.2013 | 4 Years | 17650.00 | 15003.00 |
| 14 | Mrs. Moulamma | GNM | Nursing | 01.08.2013 | 4 Years | 17650.00 | 15003.00 |
| 15 | Ms. Mehaboob Bee | GNM | Nursing | 06.08.2013 | 4 Years | 17650.00 | 15003.00 |
| 16 | Ms. Lakshmi.S | GNM | Nursing | 20.09.2013 | 3 Years 11 mnths | 17650.00 | 15003.00 |
| 17 | Mr. Thikayya | GNM, PB. BSC | Nursing | 26.09.2013 | 3 Years 11 Mnths | 17650.00 | 15003.00 |
| 18 | Mrs. Durgamma | GNM | Nursing | 06.08.2013 | 4 Years | 17650.00 | 15003.00 |
| 19 | Mrs. Radhamma | GNM | Nursing | 05.08.2013 | 4 Years | 17650.00 | 15003.00 |

| S.No. | Employee Name | Qualification | Working As | D.O.J | Working since | Basic Salar | To be paid 75% |
|---|---|---|---|---|---|---|---|
| 20 | Mrs. Nirmala | GNM | Nursing | 01.10.2014 | 2 years 10 months | 17650.00 | 13238.00 |
| 21 | Ms. Bharathi | GNM | Nursing | 01.10.2014 | 2 years 10 months | 17650.00 | 13238.00 |
| 22 | Mrs. Sridevi | GNM | Nursing | 01.06.2015 | 2 years 2 months | 17650.00 | 13238.00 |
| 23 | Mrs. Varalakshmi | GNM | Nursing | 01.06.2015 | 2 years 2 months | 17650.00 | 13238.00 |
| 24 | Mrs. Nalini | GNM | Nursing | 01.10.2015 | 1 years 10months | 17650.00 | 13238.00 |
| 25 | Mrs.Shanti | GNM | Nursing | 08.10.2015 | 1 years 10 months | 17650.00 | 13238.00 |
| 26 | Mrs.Vijayalakshmi | GNM | Nursing | 04.04.2017 | 4 months | 17650.00 | 13238.00 |

**ಕ್ರಮ ಸಂಖ್ಯೆ 20 ರಿಂದ 26 ರ ವರೆಗಿನ ಶುಶ್ರೂಷಕರನ್ನು ಅವಶ್ಯಕತೆಗನುಗುಣವಾಗಿ ಹಾಗೂ ಆ ಸಮಯದಲ್ಲಿ ಶುಶ್ರೂಷಕರ ಕೊರತೆಯನ್ನು ಸರಿಪಡಿಸಲು ನೇಮಕಮಾಡಿಕೊಳ್ಳಲಾಗಿರುತ್ತದೆ.**

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆ

Dean Cum Director
Institute of Medical Science

**Lab Technicians : - 08**

| S.No. | Employee Name | Qualification | Working As | D.O.J | Working since | Basic Salary | To be paid 85% |
|---|---|---|---|---|---|---|---|
| 01 | MD. Wajid Ali | DMLT | Lab Technician | 01.11.2013 | 3 years 9 months | 14550.00 | 12368.00 |
| 02 | Mr.Surendra Prakash | DMLT | Lab Technician | 01.11.2013 | 3 years 9 months | 14550.00 | 12368.00 |
| 03 | Mrs.Sampath Kumari | DMLT | Lab Technician | 01.11.2013 | 3 years 9 months | 14550.00 | 12368.00 |
| 04 | Mr.Gururaj M.Mattur | DMLT | Lab Technician | 01.11.2013 | 3 years 9 months | 14550.00 | 12368.00 |
| 05 | Mr. Santosh Singh | DMLT | Lab Technician | 01.11.2013 | 3 years 9 months | 14550.00 | 12368.00 |
| 06 | Mrs. Neha.B | DMLT | Lab Technician | 01.11.2013 | 3 years 9 months | 14550.00 | 12368.00 |

| S.No. | Employee Name | Qualification | Working As | D.O.J | Working since | Basic Salary | To be paid 75% |
|---|---|---|---|---|---|---|---|
| 07 | Mrs.Aruna Jyothi | DMLT | Lab Technician | 12.09.2014 | 2 years 11 months | 14550.00 | 10913.00 |
| 08 | Mr.Shaik Nisar | MLTC | Lab Technician | 18.11.2014 | 2 years 09 months | 14550.00 | 10913.00 |

**ಕ್ರಮ ಸಂಖ್ಯೆ 07 ಹಾಗೂ 08 ನೇ ತಂತ್ರಜ್ಞರನ್ನು ಹಿಂದೆ ನೇಮಕ ಮಾಡಿದ ತಂತ್ರಜ್ಞರು ತಮ್ಮ ಕೆಲಸ ಬಿಟ್ಟುಹೋಗಿರುವ ಕಾರಣ, ಸದರಿ ತಂತ್ರಜ್ಞರನ್ನು ಅವಶ್ಯಕತೆಗನುಗುಣವಾಗಿ ನೇಮಕ ಮಾಡಿಕೊಳ್ಳಲಾಗಿದೆ.**

**X- Ray Technicians : - 02**

| S.No. | Employee Name | Qualification | Working As | D.O.J | Working since | Basic Salary | To be paid 85% |
|---|---|---|---|---|---|---|---|
| 01 | Mr.Abdul Waheed | DMRT, Diplomain CT/MRI | X-Ray Techn | 01.11.2013 | 3 years 09 months | 14550.00 | 12368.00 |
| 02 | Mr.Charles Salmon | DMRT | X-Ray Techn | 01.11.2013 | 3 years 09 months | 14550.00 | 12368.00 |

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು

Dean Cum Director
Raichur Institute of Medical Science
RAICHUR

**Electricians :- 09**

| S.No. | Employee Name | Qualification | Working As | D.O.J | Working since | Basic Salary (D.E.O) | To be paid 85% |
|---|---|---|---|---|---|---|---|
| 01 | Mr.Vishwanath S. | ITI Electirican | Electrician | 01.11.2013 | 3 years 9 months | 11600.00 | 9860.00 |
| 02 | Mr.Veeresh | ITI Electirican | Electrician | 01.11.2013 | 3 years 9 months | 11600.00 | 9860.00 |
| 03 | Mr. Marigouda | ITI Electirican | Electrician | 01.11.2013 | 3 years 9 months | 11600.00 | 9860.00 |
| 04 | Mr. Zindavalli | ITI Electirican | Electrician | 01.11.2013 | 3 years 9 months | 11600.00 | 9860.00 |
| 05 | Mr. Basavaraj | ITI Electirican | Electrician | 01.11.2013 | 3 years 9 months | 11600.00 | 9860.00 |
| 06 | Mr. Raghavendra | ITI Electirican | Electrician | 01.11.2013 | 3 years 9 months | 11600.00 | 9860.00 |
| 07 | Mr. Raghavendra.H | SSLC | Electrician | 01.11.2013 | 3 years 9 months | 11600.00 | 9860.00 |
| 08 | Mr. C.Nagaraj | ITI Fitter | GasPlant | 01.11.2013 | 3 years 9 months | 11600.00 | 9860.00 |
| 09 | Mr. G.Tirumalesh | SSLC | AC | 01.11.2013 | 3 years 9 months | 11600.00 | 9860.00 |

**ಸೂಚನೆ : – ಹೆಚ್ಚುವರಿ ಎಲಕ್ಟ್ರಿಷಿಯನ್‌ಗಳು, ಗ್ಯಾಸ್ ಪ್ಲಾಂಟ್,ಎ.ಸಿ.ಮೆಕ್ಯಾನಿಕ್ ಇವರ ಶೈಕ್ಷಣಿಕ ಹಾಗೂ ಸೇವಾನುಭವ ಪರಿಗಣಿಸಿ ಅನುಮೋದನೆ ನೀಡಲಾಗಿದೆ.**

**Office Staff : - 14**

| S.No. | Employee Name | Qualification | Working As | D.O.J | Working since | Basic Salary (DataEntry Operators) | To be paid 85% |
|---|---|---|---|---|---|---|---|
| 01 | Mr.Gururaj S.Desai | BA,Higher Diploma-in Computers, MBAin Hosp.Mangmt | Data Entry Operator | 01.11.2013 | 3 years 9 months | 11600.00 | 9860.00 |
| 02 | Mr.Govindaraj | BSC | Data Entry Operator | 01.11.2013 | 3 years 9 months | 11600.00 | 9860.00 |
| 03 | Mr.Rajashekar B | BA | Data Entry Operator | 01.11.2013 | 3 years 9 months | 11600.00 | 9860.00 |
| 04 | Mrs. Bharati | PUC Diploma-in Computers | Data Entry Operator | 01.11.2013 | 3 years 9 months | 11600.00 | 9860.00 |
| 05 | Mrs. Aliya Begum | M.Com | Data Entry Operator | 01.11.2013 | 3 years 9 months | 11600.00 | 9860.00 |
| 06 | Mr. Ravindranath | BA | Data Entry Operator | 01.11.2013 | 3 years 9 months | 11600.00 | 9860.00 |

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು

Dean Cum Director
Raichur Institute of Medical Science
RAICHUR

| S.No. | Employee Name | Qualification | Working As | D.O.J | Working since | Basic Salary (Data Entry Operators) | To be paid 85% |
|---|---|---|---|---|---|---|---|
| 07 | Mrs. Mahadevi | PUC,ITI Ele & Mech, DCA | Data Entry Operator | 01.11.2013 | 3 years 9 months | 11600.00 | 9860.00 |
| 08 | Mr.Khaleeluddin H | BA | Data Entry Operator | 01.11.2013 | 3 years 9 months | 11600.00 | 9860.00 |
| 09 | Mrs. Jayashree C | BA | Data Entry Operator | 01.11.2013 | 3 years 9 months | 11600.00 | 9860.00 |
| 10 | Mrs. Padma G.S | BA | Data Entry Opeator | 01.11.2013 | 3 years 9 months | 11600.00 | 9860.00 |
| 11 | Mr. Chandrashekar | BA | Data Entry Operator | 01.11.2013 | 3 years 9 months | 11600.00 | 9860.00 |
| 12 | Mr.Wilson Thimothy | BSC | Data Entry Operator | 01.11.2013 | 3 years 9 months | 11600.00 | 9860.00 |

| S.No. | Employee Name | Qualification | Working As | D.O.J | Working since | Basic Salary (Data Entry Operators) | To be paid 75% |
|---|---|---|---|---|---|---|---|
| 13 | Mrs.Manjula Devi | BA | Data Entry Operator | 11.09.2014 | 2 years 11months | 11600.00 | 8700.00 |
| 14 | Mrs. Shabana | BA, PGDHA Hospital Management | Data Entry Operator | 11.09.2014 | 2 years 11 months | 11600.00 | 8700.00 |

**ಸೂಚನೆ : – ಡಾಟಾ ಎಂಟ್ರಿ ಆಪರೇಟರ್‌ಗಳ ಹುದ್ದೆಯಲ್ಲಿನ ಹೆಚ್ಚುವರಿ ಸಿಬ್ಬಂದಿಗಳ ಶೈಕ್ಷಣಿಕ ಹಾಗೂ ಸೇವಾನುಭವ ಪರಿಗಣಿಸಿ ಸದರಿ ಹುದ್ದೆಯ ಮೂಲ ವೇತನದ ಮೇಲೆ ಸ್ಟೈಪಂಡ ನೀಡಲು ಅನುಮೋದನೆ ನೀಡಲಾಗಿದೆ.**

**CSSD Department : - 03**

| S.No. | Employee Name | Qualification | Working As | D.O.J | Working since | Basic Salary (DEO) | To be paid 85% |
|---|---|---|---|---|---|---|---|
| 01 | Mr. N.Kumar | PUC, ITI Fitter | CSSD Dept | 01.11.2013 | 3 years 9 months | 11600.00 | 9860.00 |
| 02 | Mr. Veeresh L | SSLC | CSSD Dept | 01.11.2013 | 3 years 9 months | 11600.00 | 9860.00 |
| 03 | Mr. Neelkanta | SSLC | CSSD Dept | 01.11.2013 | 3 years 9 months | 11600.00 | 9860.00 |

**ಸೂಚನೆ : – ಸದರಿ ಸಿಬ್ಬಂದಿಗಳ ಸಿ.ಎಸ್.ಎಸ್.ಡಿ. ವಿಭಾಗದಲ್ಲಿನ ಸೇವಾನುಭವವನ್ನು ಪರಿಗಣಿಸಿ ಸದರಿ ಹುದ್ದೆಯ ಮೂಲ ವೇತನದ ಮೇಲೆ ಸ್ಟೈಪಂಡ ನೀಡಲು ಅನುಮೋದನೆ ನೀಡಲಾಗಿದೆ.**

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು

Dean Cum Director
Raichur Institute of Medical Sciences
RAICHUR

**Drivers : - 03**

| S.No. | Employee Name | Qualification | Working As | D.O.J | Working Since | Basic Salary | To be Paid 85% |
|---|---|---|---|---|---|---|---|
| 01 | Mr.Vijay Kumar | SSLC | Driver | 01.11.2013 | 3 years 9 months | 11600.00 | 9860.00 |
| 02. | Mr.Syed Ibrahim | SSLC | Driver | 01.11.2013 | 3 years 9 months | 11600.00 | 9860.00 |

| S.No. | Employee Name | Qualification | Working As | D.O.J | Working Since | Basic Salary | To be Paid 75% |
|---|---|---|---|---|---|---|---|
| 03 | Mr.Bhavani Singh | SSLC | Driver | 06.09.2014 | 2 years 11 months | 11600.00 | 8700.00 |

**Plumber : - 01**

| S.No. | Employee Name | Qualification | Working As | D.O.J | Working Since | Basic Salary | To be Paid 85% |
|---|---|---|---|---|---|---|---|
| 01 | Mr.Subash Chandra | PUC | Plumber | 01.11.2013 | 3 years 9 months | 11000.00 | 9350.00 |

**Cook :- 01**

| S.No. | Employee Name | Qualification | Working As | D.O.J | Working Since | Basic Salary | To be Paid 85% |
|---|---|---|---|---|---|---|---|
| 01 | Mr.R.Manjunath | SSLC | Cook | 01.11.2013 | 3 years 9 months | 11000.00 | 9350.00 |

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 'ಸಿ' ವೃಂದದ ಸಿಬ್ಬಂದಿಗಳಿಗೆ ಮಾತ್ರ ಅನ್ವಯವಾಗುವಂತೆ ಅವರ ಶೈಕ್ಷಣಿಕ ಹಾಗೂ ಸೇವಾನುಭವ ಆಧಾರದ ಮೇಲೆ ಈ ಮೇಲಿನಂತೆ ಸ್ಟೈಪಂಡನ್ನು, ಈ ಸಭೆಯ ಅನುಮೋದನೆ ದಿನಾಂಕದಿಂದ ಅನ್ವಯವಾಗುವಂತೆ ಪಾವತಿಸಲು ಸರ್ವಾನುಮತದಿಂದ ಆಡಳಿತ ಮಂಡಳಿಯು ಅನುಮೋದನೆ ನೀಡಲಾಯಿತು.**

**ವಿಷಯ ಸೂಚಿ ಸಂಖ್ಯೆ : 2. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕ್ಯಾಥ ಲ್ಯಾಬ್ ತಂತ್ರಜ್ಞರು ಇವರ ನೇಮಕಾತಿಯನ್ನು ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ದಿನಾಂಕ 01.01.2013 ರಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಸೂಪರ್ ಸ್ಪೆಷಾಲಿಟಿ ವಿಭಾಗವನ್ನಾಗಿ ಪ್ರಾರಂಭಿಸಿ ಈ ಭಾಗದ ರೋಗಿಗಳಿಗೆ ಅತ್ಯುನ್ನತ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಸದರಿ ಆಸ್ಪತ್ರೆಯಲ್ಲಿ ಹೃದ್ರೋಗ ವಿಭಾಗದಲ್ಲಿ 3 ಕಾರ್ಡಿಯೋಲೊಜಿಸ್ಟಗಳು ಕಾರ್ಯನಿರ್ವಹಿಸುತ್ತಿದ್ದು ಕ್ಯಾಥಲ್ಯಾಬ್‌ನ್ನು ಏಪ್ರಿಲ್-2015 ರಲ್ಲಿ ಅಳವಡಿಸಲಾಗಿರುತ್ತದೆ. ಆದರೆ, ಸರ್ಕಾರದಿಂದ ಮಂಜೂರಾದ ಹುದ್ದೆಗಳಲ್ಲಿ ಕ್ಯಾಥಲ್ಯಾಬ್ ಟೆಕ್ನಿಷಿಯನ್ ಹುದ್ದೆ ಇರುವದಿಲ್ಲ. ಇದರಿಂದ ಆಸ್ಪತ್ರೆಯಲ್ಲಿ ಅಳವಡಿಸಿದ ಕ್ಯಾಥಲ್ಯಾಬ್ ಉಪಕರಣದ ಹೊರತಾಗಿಯೂ ಕ್ಯಾಥಲ್ಯಾಬ್ ಟೆಕ್ನಿಷಿಯನ್ ಕೊರತೆಯಿಂದ ಹೃದ್ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲು ತೊಂದರೆಯಾಗುತ್ತಿತ್ತು. ಕಾರಣ, ಸದರಿ ಆಸ್ಪತ್ರೆಗೆ ಸರ್ಕಾರದಿಂದ ಮಂಜೂರಾದ 2 ಎಕೊ ಟೆಕ್ನಿಷಿಯನ್ ಹುದ್ದೆಗಳಿಗೆ

ವಿಶೇಷಾಧಿಕಾರಿಗಳು
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆ

ಶ್ರೀ. ನಿಯಾಜುದ್ದೀನ್ ಕ್ಯಾಥಲಾಬ್ ಟೆಕ್ನಿಷಿಯನ್ ಇವರನ್ನು ನೇರ ಸಂದರ್ಶನದ ಮುಖಾಂತರ ನೇಮಕಾತಿಮಾಡಿಕೊಂಡು ಸದರಿ ಸಿಬ್ಬಂದಿ ದಿನಾಂಕ 05.08.2015 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಈಗಾಗಲೇ ಈ ಕೆಳಗಿನಂತೆ ಹೃದ್ರೋಗಿಗಳಿಗೆ ಕ್ಯಾಥಲ್ಯಾಬ್ ನಲ್ಲಿ ಇಲ್ಲಿಯವರೆಗೆ ಚಿಕಿತ್ಸೆಯನ್ನು ನೀಡಲಾಗಿದೆ.

| | |
|---|---|
| Angiogram | 1039 |
| Angioplasty(PTCA) | 132 |
| TPI | 52 |
| Cath Study | 02 |
| PPI | 12 |
| Pericardial tapping | 11 |

ಮುಂದುವರೆದು, ಸದರಿ ಕ್ಯಾಥಲ್ಯಾಬ್ ಟೆಕ್ನಿಷಿಯನ್‌ಗೆ ಪ್ರಸ್ತುತ ಮೂಲ ವೇತನ ಶ್ರೇಣಿಯು ರೂ. 14,550–26,700/– ನೀಡಲಾಗುತ್ತಿದೆ. ಆದರೆ, ಸದರಿಯವರ ನೇರ ಸಂದರ್ಶನದ ಅಧಿಸೂಚನೆಯಲ್ಲಿ ರೂ.17,650–32000/– ವೇತನ ಶೇಣಿಯನ್ನು ನಮೂದಿಸಿರಲಾಗಿರುತ್ತದೆ. ಸದರಿಯವರು ಶೈಕ್ಷಣಿಕ ಅರ್ಹತೆ ಹೊಂದಿದ್ದು ಹಾಗೂ ಈಗಾಗಲೆ ಶ್ರೀ.ಜಯದೇವ ಸಂಸ್ಥೆ, ಬೆಂಗಳೂರು ಇಲ್ಲಿ ಸದರಿ ಹುದ್ದೆಗೆ ರೂ.17,650–32000/– ವೇತನ ಶ್ರೇಣಿಯಿರುತ್ತದೆ. ಕಾರಣ, ತಮ್ಮ ಹುದ್ದೆಗೂ ಕೂಡ ರೂ.17,650–32000/– ವೇತನ ಶ್ರೇಣಿ ನಿಗದಿಪಡಿಸಲು ಕೋರಿರುತ್ತಾರೆ.

ಕಾರಣ, ಶ್ರೀ. ನಿಯಾಜುದ್ದೀನ್ ಕ್ಯಾಥಲಾಬ್ ಟೆಕ್ನಿಷಿಯನ್ ಇವರನ್ನು ನೇಮಕಾತಿ ಮಾಡಿಕೊಂಡಿರುವ ಕುರಿತು ಘಟನೋತ್ತರ ಅನುಮೋದನೆ ಹಾಗೂ ಕ್ಯಾಥಲಾಬ್ ಟೆಕ್ನಿಷಿಯನ್ ಹುದ್ದೆಯ ಮೂಲ ವೇತನ ಶ್ರೇಣಿ ರೂ.17,650–32000/– ಗಳನ್ನು ನಿಗದಿಪಡಿಸಿ ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ : – ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕ್ಯಾಥಲ್ಯಾಬ್ ಉಪಕರಣ ಅಳವಡಿಸಿದ್ದು, ಈಗಾಗಲೆ ಮೂವರು ಕಾರ್ಡಿಯೋಲೊಜಿಸ್ಟ್‌ಗಳು ಕಾರ್ಯನಿರ್ವಹಿಸುತ್ತಿದ್ದು ಕ್ಯಾಥಲ್ಯಾಬ್ ತಂತ್ರಜ್ಞರ ಅವಶ್ಯಕತೆಯ ಕುರಿತು ಹೃದ್ರೋಗ ತಜ್ಞರಾದ ವಿಶೇಷಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಲಾಯಿತು. ಆಸ್ಪತ್ರೆಗೆ ಬರುವ ಹೃದ್ರೋಗಿಗಳ ಹಿತದೃಷ್ಟಿಯಿಂದ ಹಾಗೂ ಆಸ್ಪತ್ರೆಯಲ್ಲಿ ಹೃದಯ ವಿಭಾಗದಲ್ಲಿ ಅತ್ಯುನ್ನತ ಚಿಕಿತ್ಸೆ ನೀಡುವ ಸಲುವಾಗಿ ಕ್ಯಾಥ್‌ಲ್ಯಾಬ್ ತಂತ್ರಜ್ಞರ ಅವಶ್ಯಕತೆಯಿರುವದರಿಂದ ಸಭೆಯು ತತ್ವಶಃ (In principle) ಒಪ್ಪಿ ಸರ್ಕಾರದ ಮಂಜೂರಾತಿಗಾಗಿ ಪ್ರತ್ಯೇಕ ಕಡತ ಸಲ್ಲಿಸಿ ಮಂಜೂರಾತಿ ಪಡೆಯಲು ಆಡಳಿತ ಮಂಡಳಿಯು ಸೂಚಿಸಿತು.**

**ವಿಷಯ ಸೂಚಿ : 3. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವೇತನ ತಾರತಮ್ಯದ ಹಿಂಬಾಕಿ ಪಾವತಿಸುವ ಕುರಿತು.**

ಸರ್ಕಾರದ ಆದೇಶ ಸಂಖ್ಯೆ : ಆಕುಕ 94 ಎಂಎಂಸಿ 2012, ದಿನಾಂಕ 23.03.2013 ಸರ್ಕಾರಿ ಆದೇಶ ಹಾಗೂ ರಿಮ್ಸ್ ಸಂಸ್ಥೆಯ 25ನೇ ಆಡಳಿತ ಮಂಡಳಿ ವಿಷಯ ಸೂಚಿ 3 ರ ಸಭಾ ನಡವಳಿಗಳು. ರಿಮ್ಸ್ ಸಂಸ್ಥೆಯ 25ನೇ ಆಡಳಿತ ಮಂಡಳಿ ಆದೇಶದಂತೆ, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಬೋಧಕ ಸಿಬ್ಬಂದಿಗಳಿಗೆ Fitment Table ರ ಅನ್ವಯ ವೇತನ ತಾರತಮ್ಯವನ್ನು ಸರಿಪಡಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ.

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆ

Dean Cum Director
Raichur Institute of Medical Science
RAICHUR

ಮುಂದುವರೆದು, ಸದರಿ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಬೋಧಕ ಸಿಬ್ಬಂದಿಗಳ ಪರಿಷ್ಕೃತ ವೇತನವನ್ನು ನವೆಂಬರ್–2013 ರಿಂದ ಜುಲೈ–2016 ರ ವರೆಗಿನ ಅವಧಿಯ ವೇತನ ತಾರತಮ್ಯ ಹಿಂಬಾಕಿ ಮೊತ್ತ ಒಟ್ಟು.ರೂ.28,18,904/– ನ್ನು ಪಾವತಿಸಬೇಕಿದ್ದು ಸದರಿ ಮೊತ್ತವು ಈ ಆಸ್ಪತ್ರೆಗೆ ಬಿಡುಗಡೆಗೊಂಡ ಲೆಕ್ಕ ಶೀರ್ಷಿಕೆ 2210–01–110–2–37–101 (ಯೋಜನೆ) ಅನುದಾನ ಲಭ್ಯವಿರುತ್ತದೆ.

ಕಾರಣ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವೇತನ ತಾರತಮ್ಯ ಹಿಂಬಾಕಿ ಪಾವತಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ : – ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಅಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವೇತನ ತಾರತಮ್ಯದ ಹಿಂಬಾಕಿ(Arrears) ಪಾವತಿಸುವ ಕುರಿತು ಚರ್ಚಿಸಲಾಗಿ, ಸಭೆಯು ಸರ್ಕಾರಕ್ಕೆ ಪ್ರತ್ಯೇಕ ಪ್ರಸ್ತಾವನೆಯನ್ನು ಸಮಂಜಸ ದಾಖಲೆಗಳೊಂದಿಗೆ ಹಾಗೂ ಮಾಹಿತಿಯೊಂದಿಗೆ ಕಡತ ಸಲ್ಲಿಸಿ ಮಂಜೂರಾತಿ ಪಡೆಯಲು ಸೂಚಿಸಲಾಯಿತು.**

**ವಿಷಯ ಸೂಚಿ 4. ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿಆಸ್ಪತ್ರೆಯಲ್ಲಿ ಲ್ಯಾಂಡ್ರಿ ಉಪಕರಣಗಳ ಖರೀದಿಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಪ್ರಕರಣದ ಕುರಿತು.**

ರಾಜೀವಗಾಂಧಿ ಸೂಪರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲ್ಯಾಂಡ್ರಿ ಉಪಕರಣಗಳ ಖರೀದಿಗೆ ಸಂಬಂಧಪಟ್ಟಂತೆ, 2003–04 ರಲ್ಲಿ ಖರೀದಿಯ ಕುರಿತು ಚೆನ್ನೈ ನ್ಯಾಯಾಲಯದಲ್ಲಿರುವ ಪ್ರಕರಣವು, M/s LazerInstrumention Pvt Ltd., Chennai ಕಂಪನಿಯಿಂದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲ್ಯಾಂಡ್ರಿ ಉಪಕರಣಗಳನ್ನು ಖರೀದಿಸಿ ಬಿಲ್ಲನ್ನು ಪಾವತಿಸದೆ ಪ್ರಕರಣವು ನ್ಯಾಯಾಲಯದಲ್ಲಿರುತ್ತದೆ.

ಮುಂದುವರೆದು, ಸದರಿ ಪ್ರಕರಣವು ಚೆನ್ನೈ ನ್ಯಾಯಾಲಯದಿಂದ ರಾಯಚೂರು ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಆದೇಶ ಕಾರ್ಯಗತಗೊಳಿಸಲು ವರ್ಗಾಯಿಸಿರುತ್ತದೆ. ಅದರಂತೆ, ರಾಯಚೂರು ಜಿಲ್ಲಾ ಸತ್ರ ನ್ಯಾಯಾಲಯವು ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ರೂ.36,93,097/– ಗಳನ್ನು ವಸೂಲಿ ಮಾಡಲು ಸದರಿ ಆಸ್ಪತ್ರೆಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಉಲ್ಲೇಖ(6) ರಅನ್ವಯ, ಆದೇಶ(14.07.2016) ಹಾಗೂ ವಾರೆಂಟ್ ಜಾರಿಮಾಡಿರುತ್ತದೆ. ಅದರಂತೆ, ನ್ಯಾಯಾಲಯದ ಸಿಬ್ಬಂದಿ ದಿನಾಂಕ 20.08.2016 ರಂದು ಆಸ್ಪತ್ರೆಯಲ್ಲಿನ ಕಛೇರಿ ಸಾಮಗ್ರಿಗಳನ್ನು ಮುಟ್ಟುಗೋಲು ಹಾಕಿಕೊಂಡು ತೆಗೆದುಕೊಂಡು ಹೋಗಿರುತ್ತಾರೆ.

ಉಲ್ಲೇಖಿತ ಪತ್ರದಲ್ಲಿ ತಮ್ಮ ಆದೇಶದಂತೆ, ಸದರಿ ವಿಷಯದ ಕುರಿತು ಚೆನ್ನೈ ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡುವ ಕುರಿತು, ರಾಯಚೂರು ಜಿಲ್ಲಾ ಸರ್ಕಾರಿ ವಕೀಲರ ಅಭಿಪ್ರಾಯ ಪಡೆಯಲಾಗಿರುತ್ತದೆ. ಚೆನ್ನೈನ ವಕೀಲರಾದ ಶ್ರೀ ಲಕ್ಷ್ಮಿನಾರಾಯಣ ಇವರು ಸದರಿ ಪ್ರಕರಣವನ್ನು ಈ ಹಂತದಲ್ಲಿ ಮುಂದುವರೆಸುವದು ಕಷ್ಟಸಾಧ್ಯವೆಂದು ಅಭಿಪ್ರಾಯ ನೀಡಿರುತ್ತಾರೆ. ಹಾಗೆಯೇ, ರಿಮ್ಸ್ ಸಂಸ್ಥೆಯ ವಕೀಲರಾದ ಶ್ರೀ. ಮಲ್ಲಿನಾಥರವರ ಅಭಿಪ್ರಾಯವನ್ನು ಸಹ ಪಡೆಯಲಾಗಿದ್ದು, ಇವರು ಸಹ ಈ ಹಂತದಲ್ಲಿ ಪ್ರಕರಣವನ್ನು ಮುಂದುವರೆಸುವದರ ಬದಲು ರಾಜಿ ಮಾಡಿಕೊಳ್ಳುವ ಕ್ರಮ ಜರುಗಿಸಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ವಿಶೇಷಾಧಿಕಾರಿಗಳು

Dean Cum Director
Raichur Institute of Medical Science
RAICHUR

ಮುಂದುವರೆದು, ಸದರಿ ಪ್ರಕರಣವನ್ನು ದಿನಾಂಕ 12.08.2017 ರಂದು ಜರುಗುವ ಲೋಕ ಅದಾಲತ್‌ದಲ್ಲಿ ರಾಜಿ ಮಾಡಿಕೊಳ್ಳಲು ವರ್ಗಾಯಿಸಲಾಗಿರುತ್ತದೆ. ಸದರಿ ಅಂಶವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿ ಮುಂದಿನ ಮಾರ್ಗದರ್ಶನ ಕೋರಿದೆ.

**ಸಭೆಯ ತೀರ್ಮಾನ : – ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಮೇಲಿನ ಅಂಶಗಳ ಕುರಿತು ಸಭೆಯು ಟಿಪ್ಪಣಿಯನ್ನು ತೆಗೆದುಕೊಳ್ಳಲಾಯಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ : –**

**ವಿಷಯ ಸೂಚಿ : 1. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯ ಸಾಮಾನ್ಯ ವೈದ್ಯಕೀಯ ವಿಭಾಗ(General Medicine) ಹಾಗೂ ಇತರೆ ಸಂಬಂದಪಟ್ಟ ವಿಭಾಗಗಳನ್ನು ಸ್ಥಳಾಂತರಿಸುವ ಕುರಿತು.**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯ ಸಾಮಾನ್ಯ ವೈದ್ಯಕೀಯ ವಿಭಾಗ (General Medicine) ಹಾಗೂ ಇತರೆ ಸಂಬಂದಪಟ್ಟ ವಿಭಾಗಳನ್ನು ಸ್ಥಳಾಂತರಿಸುವ ಬಗ್ಗೆ ಭಾರತೀಯ ವೈದ್ಯಕೀಯ ಪರಿಷತ್ ನ ನಿಯಮದ ಪ್ರಕಾರ ಕುರಿತು ಸಭೆಯ ಗಮನಕ್ಕೆ ತರಲಾಯಿತು. ಸದರಿ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

**ಸಭೆಯ ತೀರ್ಮಾನ : – ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸಭೆಯು ಸಾಮಾನ್ಯ ವೈದ್ಯಕೀಯ ವಿಭಾಗ (General Medicine) ಹಾಗೂ ಇತರೆ ಸಂಬಂದಪಟ್ಟ ವಿಭಾಗಳನ್ನು ರಿಮ್ಸ್ ಬೋಧಕ ಆಸ್ಪತ್ರೆಯಿಂದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತಿರಿಸಲು ರಿಮ್ಸ್ ಸಂಸ್ಥೆಯ ಸದರಿ ವಿಭಾಗಗಳ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸಿ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಿದ್ದಪಡಿಸಿಕೊಂಡು ಸ್ಥಳಾಂತರಿಸಲು ಸಭೆಯು ಸರ್ವಾನುಮ್ಮತದಿಂದ ಅಂಗೀಕರಿಸಿ ಅನುಮೋದಿಸಲಾಯಿತು.**

**ವಿಷಯ ಸೂಚಿ 2. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೆಲವು ವಿಭಾಗಗಳು ಗಣನೀಯವಾಗಿ ಕಡಿಮೆ ರೋಗಿಗಳ ಚಿಕಿತ್ಸೆ ಪಡೆದ ಸಂಖ್ಯೆವಾರು ಪರಿಶೀಲಿಸಿದ ಕುರಿತು.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಿದ ವಿಭಾಗವಾರು ಅಂಕಿ ಅಂಶಗಳನ್ನು(Statistics) ಪರಿಶೀಲಿಸಿದ ಸಭೆಯು ಫೇಶಿಯೋ ಮೆಕ್ಷಿಲರಿ ವಿಭಾಗ, ಪೆಡಿಯಾಟ್ರಿಕ್ ಸರ್ಜರಿ ವಿಭಾಗಗಳಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ವಾರು ಅತಿ ಕಡಿಮೆಯಿರುವ ಕುರಿತು ಸಭೆಯಲ್ಲಿ ಪರಿಶೀಲಿಸಲಾಯಿತು. ಸದರಿ ವಿಭಾಗಗಳಿಗೆ ರೋಗಿಗಳ ಸಂಖ್ಯೆ ಅತಿ ಕಡಿಮೆಯಿರುವ ಕುರಿತು ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

ವಿಶೇಷಾಧಿಕಾರಿಗಳು
ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆ

Dean Cum Director
Raichur Institute of Medical Science
RAICHUR

ಸಭೆಯ ತೀರ್ಮಾನ:- ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಫೇಶಿಯೋ ಮೆಕ್ಸಿಲರಿ ವಿಭಾಗ, ಪೆಡಿಯಾಟ್ರಿಕ್ ಸರ್ಜರಿ ವಿಭಾಗಗಳಲ್ಲಿ ಬೋಧಕ ಸಿಬ್ಬಂದಿಗಳನ್ನು ಸದರಿ ವಿಭಾಗಗಳನ್ನು ಮೇಲ್ದರ್ಜೆಗೇರಿಸುವವರೆಗೆ ಹಾಗೂ ಸದರಿ ವಿಭಾಗಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚುವವರೆಗೆ ರಿಮ್ಸ್ ಸಂಸ್ಥೆಯಲ್ಲಿಯೂ ಸಹ ಕರ್ತವ್ಯ ನಿಯೋಜಿಸಲು ಸಭೆಯು ತೀರ್ಮಾನಿಸಿ ಆದೇಶಿಸಿತು.

**ವಿಷಯ ಸೂಚಿ : 3. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸಂಸ್ಥೆಯ ಹಿತದೃಷ್ಟಿಯಿಂದ ಹಾಗೂ ರೋಗಿಗಳಿಗೆ ಅನುಕೂಲವಾಗಲು ನಿಯೋಜಿಸಿದ ಕಡೆ ಕರ್ತವ್ಯ ನಿರ್ವಹಿಸುವ ಕುರಿತು.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಬೋಧಕ ಸಿಬ್ಬಂದಿಗಳು ಹಾಗೂ ಬೋಧಕೇತರ ಸಿಬ್ಬಂದಿಗಳು ಸಂಸ್ಥೆಯ ಹಿತದೃಷ್ಟಿಯಿಂದ ಹಾಗೂ ರೋಗಿಗಳಿಗೆ ಅನುಕೂಲವಾಗಲು ನಿಯೋಜಿಸಿದ ಕಡೆ ಕಾರ್ಯನಿರ್ವಹಿಸುವ ಕುರಿತು ಚರ್ಚಿಸಲಾಯಿತು ಹಾಗೂ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

ಸಭೆಯ ತೀರ್ಮಾನ : - ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇಲ್ಲಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸಂಸ್ಥೆಯ ಹಿತದೃಷ್ಟಿಯಿಂದ ಹಾಗೂ ರೋಗಿಗಳಿಗೆ ಅನುಕೂಲವಾಗಲು ನಿಯೋಜಿಸಿದ ಕಡೆ ಕರ್ತವ್ಯ ನಿರ್ವಹಿಸಬೇಕು ಎಂದು ಸಭೆಯು ತೀರ್ಮಾನಿಸಿ ಆದೇಶಿಸಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | | |
|---|---|---|---|
| ಡಾ॥ಸುರೇಶ.ವಿ.ಸಗರದ<br>ವಿಶೇಷ ಆಹ್ವಾನಿತರು ಹಾಗೂ<br>ವಿಶೇಷಾಧಿಕಾರಿಗಳು,<br>ರಾಜೀವ ಗಾಂಧಿ ಸೂಪರ್<br>ಸ್ಪೆಷಾಲಿಟಿ ರಾಯಚೂರು. | ಡಾ॥ಕವಿತಾ ಪಾಟೀಲ್<br>ಸದಸ್ಯ ಕಾರ್ಯದರ್ಶಿಗಳು ಹಾಗೂ<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ<br>ಸಂಸ್ಥೆ,ರಾಯಚೂರು. | ಮಂಜುಲ.ವಿ. ಭಾ.ಆ.ಸೇ.<br>ಉಪಾಧ್ಯಕ್ಷರು<br>ಸರ್ಕಾರದ ಅಪರ ಮುಖ್ಯ<br>ಕಾರ್ಯದರ್ಶಿಗಳು<br>ವೈದ್ಯಕೀಯ ಶಿಕ್ಷಣ ಇಲಾಖೆ,<br>ಬೆಂಗಳೂರು. | ಡಾ॥ಶರಣ ಪ್ರಕಾಶ.ಆರ್.ಪಾಟೀಲ್<br>ಅಧ್ಯಕ್ಷರು ಹಾಗೂ<br>ವೈದ್ಯಕೀಯ ಶಿಕ್ಷಣ ಸಚಿವರು<br>ಬೆಂಗಳೂರು |